**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ**

**ಸಿಸಿ ಸಂಖ್ಯೆ: 3000/2018**

| | |
|---|---|
| ಹೆಸರು | : ಕಲ್ಲೈಮಾರ್ |
| ತಂದೆಯ ಹೆಸರು | : ದಿ. ಗೋವಿಂದನ್ |
| ಫ್ರಾಯ | : 57 ವರ್ಷ |
| ಉದ್ಯೋಗ | : ಪೊಲೀಸ್ ಉಪ ನಿರೀಕ್ಷಕರು, |
| ವಾಸ | : ಬಂಟ್ವಾಳ |

**ದಿನಾಂಕ 02.09.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ನಾನು 2012 ರಿಂದ ಮೇ 2019 ರವರೆಗೆ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 31.5.2018 ರಂದು ಚಾಸಾ12 ರವರಿಂದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿಃ 31.5.2018 ರಂದು ಚಾಸಾ5 ರವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ಅದೇ ದಿನ ಮಾನ್ಯ ನ್ಯಾಯಾಲಯದ ಆದೇಶದಂತೆ ಚಾಸಾ5 ರವರಿಗೆ ಪ್ರಕರಣದಲ್ಲಿ ಸ್ವಾದೀನಪಡಿಸಿಕೊಂಡ ಪಿಕ್‌ಅಪ್ ವಾಹನವನ್ನು ರಶೀದಿ ಮುಖೇನ ಬಿಟ್ಟುಕೊಟ್ಟಿರುತ್ತೇನೆ. ಹಾಗೂ ಠಾಣಾ ಹೆಚ್.ಸಿ 607 ರಾಜೇಶ್ ರವರಿಂದ ಪಿಕ್‌ಅಪ್ ವಾಹನದ ಫೋಟೋವನ್ನು ತೆಗೆಸಿ ಅವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿ ರಂತೆ ದೃಡಪತ್ರವನ್ನು ಪಡೆದುಕೊಂಡಿರುತ್ತೇನೆ. ರಶೀದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ8 ಎಂದು ಸಾಕ್ಷಿ ಸಹಿಯನ್ನು ನಿಪಿ8(ಎ) ಎಂದು ಗುರುತಿಸಲಾಯಿತು. ದೃಡಪತ್ರವನ್ನು ನಿಪಿ9 ಎಂದು ಸಾಕ್ಷಿ ಸಹಿಯನ್ನು ನಿಪಿ9(ಎ) ಎಂದು ಗುರುತಿಸಲಾಯಿತು. ಚಾಸಾ5 ರವರ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ10 ಎಂದು ಗುರುತಿಸಲಾಯಿತು. ದಿಃ 7.8.2018 ರಂದು ಆರೋಪಿತರ ವಿರುದ್ಧ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ವಶಪಡಿಸಿದ ವಾಹನದ ಫೋಟೋ ನೋಡಿದರೆ ಗುರುತಿಸಬಲ್ಲೆ. ಕಡತದಲ್ಲಿ ವಾಹನದ ಫೋಟೋ ಇಲ್ಲದ ಕಾರಣ ಗುರುತಿಸಿರುವುದಿಲ್ಲ.

ಪಾಟೀ ಸವಾಲುಃ 1 ರಿಂದ 5 ನೇ ಆರೋಪಿತರ ಪರ ಶ್ರೀ. ಎಸ್.ಪಿ ವಕೀಲರಿಂದಃ

ಯಾವ ಜಾತಿಯ ದನ ಎಂದು ಗೊತ್ತಾ ಎಂದರೆ ಸಾಕ್ಷಿ ಊರಿನ ದನ ಎಂದು ಹೇಳುತ್ತಾರೆ. ದನದ ಕೊಟ್ಟಿಗೆಯನ್ನು ನೋಡಿದ್ದೀರಾ ಎಂದರೆ ತನಿಖಾಧಿಕಾರಿಗಳು ನೋಡಿದ್ದಾರೆ. ಅಂತಿಮ ವರದಿ ಸಲ್ಲಿಸುವ ಪೂರ್ವದಲ್ಲಿ ಕೊಟ್ಟಿಗೆ ಮತ್ತು ಮನೆಯ ವಿಚಾರಗಳ ಬಗ್ಗೆ ವಿಚಾರಣೆ ಮಾಡಿ ಛಾಯಾಚಿತ್ರವನ್ನು ತೆಗೆದು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕಡತದಲ್ಲಿರುವ ನಕಾಶೆ ಮತ್ತು ಮಹಜರ್ ನ್ನು ನೋಡಿ ವರದಿ ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ. ನೀವು ಪರಿಶೀಲನೆ ಮಾಡುವಾಗ ಮನೆಯಿಂದ ಕೊಟ್ಟಿಗೆ ಕಾಣುತ್ತದೆ ಎಂಬ ಬಗ್ಗೆ ತನಿಖೆ ಮಾಡಿದ್ದೀರಾ ಅಥವಾ ಪರಿಶೀಲನೆ ಮಾಡಿದ್ದೀರಾ ಎಂದರೆ ಇಲ್ಲ. ಮನೆಯ ಅಂಗಳದಲ್ಲಿ ನಿಂತುಕೊಂಡರೆ ಕೊಟ್ಟಿಗೆ ಕಾಣುವುದಿಲ್ಲ. ಮಹಜರ್ ನ್ನು ಎಲ್ಲಿ ಕುಳಿತು ಮಾಡಿದ್ದಾರೆ ಎಂಬ ಬಗ್ಗೆ ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಗೆ ಬದಿಯಲ್ಲಿ ಕುಳಿತು ಮಾಡಿದ್ದಾರೆ ಎಂದು ಹೇಳುತ್ತಾರೆ. ಕೊಟ್ಟಿಗೆ ಯಾವ ಬದಿ ಎಂದು ಉಲ್ಲೇಖ ಇಲ್ಲ ಎಂದರೆ ಹೌದು. ದನಗಳಿಗೆ ಹುಲ್ಲು ಹಾಕುವ ಜಾಗದಲ್ಲಿ ಕೊಂಡಿಗಳು ಇದ್ದ ಬಗ್ಗೆ ದನಗಳನ್ನು ಕಟ್ಟಿಹಾಕಲು ಇರುವ ವ್ಯವಸ್ಥೆ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ದನಗಳಿಗೆ ಮೇವು ಮತ್ತು ನೀರನ್ನು ಹಾಕಲು ಇರುವ ವ್ಯವಸ್ಥೆಗಳನ್ನು ನಮೂದು ಮಾಡಿದ್ದೀರಾ ಎಂದರೆ ಹೌದು. ವಾಹನವನ್ನು ಸ್ವಾಧೀನಪಡಿಸಿಕೊಳ್ಳುವಾಗ ಅಥವಬಾ ಬಿಡುಗಡೆಗೊಳಿಸುವಾಗ ಅದಕ್ಕೆ ಸಂಬಂಧಪಟ್ಟ ಫೋಟೋಗಳನ್ನು ತೆಗೆದುಕೊಂಡು ಕಡತಕ್ಕೆ ಅಳವಡಿಸಿಕೊಳ್ಳಬೇಕು ಎಂದರೆ ಹೌದು. ತಯಾರಾದ ಕಡತಕ್ಕೆ ಪೂರಕವಾಗಿ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ದಾಖಲಾತಿಗಳನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಇತರೆ ಅಧಿಕಾರಿಗಳು ನೀಡಿದ ದಾಖಲೆಗಳನ್ನು ಸಂಗ್ರಹಿಸಿ ಯಾವುದೇ ರೀತಿಯ ಪರಿಶೀಲನೆ ಮಾಡದೇ ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಹಸುವನ್ನು ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)